DFA/2891368

## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **403** |
| ಸದಸ್ಯರ ಹೆಸರು | : ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : ಸಾರಿಗೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 19.08.2026 |

| | ಪ್ರಶ್ನೆ | ಉತ್ತರ |
|---|---|---|
| (ಅ) | ಎಲೆಕ್ಟ್ರಾನಿಕ್ ಸಿಟಿ RTO ಕಛೇರಿಯಲ್ಲಿ ಖಾಸಗಿ ಸೇವಾ ವಾಹನಗಳು ಹಾಗೂ ಮ್ಯಾಕ್ಸಿ ಕ್ಯಾಬ್ ವಾಹನಗಳಿಗೆ ಕಡಿಮೆ ನೆಲ ವಿಸ್ತೀರ್ಣ ನಿಗದಿಗೊಳಿಸಿ ನೋಂದಣಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. |
| ಆ) | ಬಂದಿದ್ದಲ್ಲಿ, ಈ ರೀತಿ ನೋಂದಣಿಯಾಗಿರುವ ವಾಹನಗಳೆಷ್ಟು; ವಾಹನಗಳ ಸಂಪೂರ್ಣ ಮಾಹಿತಿ ನೀಡುವುದು; | ಆಡಿಟ್ ಆಕ್ಷೇಪಣೆಯಲ್ಲಿ 3,171 ವಾಹನಗಳಿದ್ದು, ಅವುಗಳಲ್ಲಿ 1,296 ವಾಹನಗಳ ನೆಲ ವಿಸ್ತೀರ್ಣವನ್ನು ಭೌತಿಕವಾಗಿ ತಪಾಸಣೆ ಮಾಡಲಾಗಿದ್ದು, 829 ವಾಹನಗಳ ನೆಲ ವಿಸ್ತೀರ್ಣವು ಸರಿಯಾಗಿರುವುದು ಕಂಡು ಬಂದಿರುತ್ತದೆ ಹಾಗೂ ನೆಲ ವಿಸ್ತೀರ್ಣ ವ್ಯತ್ಯಾಸವಿದ್ದ 217 ವಾಹನಗಳಿಂದ ರೂ. 92,50,014 ಗಳ ಬಾಕಿ ತೆರಿಗೆಯನು ವಸೂಲಿ ಮಾಡಲಾಗಿರುತದೆ. ಉಳಿದ ಆಡಿಟ್ ಆಕ್ಷೇಪಣೆಯಲ್ಲಿರುವ ವಾಹನಗಳನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದ್ದು, ವಾಹನ ಮಾಲೀಕರುಗಳಿಗೆ ನೋಟೀಸ್‌ಗಳನ್ನು ಜಾರಿಗೊಳಿಸಲಾಗಿರುತ್ತದೆ. |
| ಇ) | ಈ ರೀತಿ ಕಡಿಮೆ ನೆಲ ವಿಸ್ತೀರ್ಣ ಮಾಡಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟವೆಷ್ಟು; ಸರ್ಕಾರದ ಬೊಕ್ಕಸದ ನಷ್ಟಕ್ಕೆ ಕಾರಣರಾದವರು ಯಾರು; (ಅವರ ಸಂಪೂರ್ಣ ವಿವರ ನೀಡುವುದು) | ಆಡಿಟ್ ಆಕ್ಷೇಪಣೆಯಲ್ಲಿರುವ ಮೊತ್ತ ರೂ.5,40,04,944/- ಗಳಾಗಿದ್ದು, ಈ ಬಗ್ಗೆ ಸಾರಿಗೆ ಇಲಾಖೆಯ ಹಂತದಲ್ಲಿ ತಂಡಗಳನ್ನು ರಚಿಸಿಕೊಂಡು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುವ ಕಡಿಮೆ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳನ್ನು ಭೌತಿಕವಾಗಿ ಪರಿಶೀಲಿಸಿ ವ್ಯತ್ಯಾಸವಿದ್ದಲ್ಲಿ ಕಡಿಮೆ ನೆಲ ವಿಸ್ತೀರ್ಣವನ್ನು ನಮೂದಿಸಿ ನೋಂದಣಿಗೆ ಶಿಫಾರಸು ಮಾಡಿರುವ ಹಿರಿಯ ಮೋಟಾರು ವಾಹನ ನಿರೀಕ್ಷಕರ/ಮೋಟಾರು ವಾಹನ ನಿರೀಕ್ಷಕರ ವಿವರಗಳನ್ನು ಹಾಗೂ |
| ಈ) | ಸದರಿಯವರ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಆದರ ಸಂಪೂರ್ಣ ಮಾಹಿತಿ ನೀಡುವುದು; ಕ್ರಮ ಜರುಗಿಸದಿದ್ದಲ್ಲಿ ಕಾರಣಗಳನ್ನು ತಿಳಿಸುವುದು? | ಅವರಿಂದಾಗಿರುವ ವ್ಯತ್ಯಾಸದ ಮೊತ್ತವನ್ನು ನಮೂದಿಸಿ ವರದಿಯನ್ನು ಸಲ್ಲಿಸುವಂತೆ ಮತ್ತು ಕಡಿಮೆ ನೆಲವಿಸ್ತೀರ್ಣ ನಮೂದಿಸಿ ನೋಂದಣಿ ಮಾಡಿರುವ ವಾಹನಗಳನ್ನು ಜಪ್ತಿ ಮಾಡಿ ತೆರಿಗೆಯನ್ನು ವಸೂಲಿಸಲು ಕ್ರಮ ವಹಿಸುವಂತೆ ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ನಗರ) ವಿಭಾಗ, ಬೆಂಗಳೂರು ಇವರಿಗೆ ದಿನಾಂಕ:28.07.2025 ಮತ್ತು 25.11.2025 ರ ಪತ್ರಗಳಲ್ಲಿ ತಿಳಿಸಲಾಗಿರುತ್ತದೆ. ಸದರಿ ಅಧಿಕಾರಿಯವರಿಂದ ವರದಿ ಬಂದ ನಂತರ ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟದ ಮಾಹಿತಿಯನ್ನು ಹಾಗೂ ಇದಕ್ಕೆ ಕಾರಣರಾದವರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

ಟಿಡಿ:71 ಟಿಡಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು.



File No. TD/71/TDQ/2026-DO-Trans (Computer No. 2264622)